# ಮಕ್ಕಳಲ್ಲಿ ಕವಾಸಾಕಿ ಕಾಯಿಲೆ

**ವಾತಾವರಣದಲ್ಲಿರುವ ಮೂಲ ಕೊರೊನಾ ವೈರಾಣುವನ್ನೂ ಒಳಗೊಂಡು ಹಲವಾರು ಸೂಕ್ಷ್ಮಾಣುಗಳ ಸೋಂಕಿನಿಂದ ಉಂಟಾಗುವ ಶರೀರದ ರಕ್ಷಣಾ ವ್ಯವಸ್ಥೆಯಲ್ಲಿನ ವ್ಯತ್ಯಯವೇ ಕವಾಸಾಕಿ ಕಾಯಿಲೆ.**

■ ಡಾ. ಕೆ. ಬಿ. ರಂಗಸ್ವಾಮಿ

ಇತ್ತೀಚೆಗೆ ಕವಾಸಾಕಿ ಕಾಯಿಲೆಯನ್ನು ಹೋಲುವಂಥ ಕೆಲವು ರೋಗಲಕ್ಷಣಗಳನ್ನು, ನಮ್ಮ ದೇಶವನ್ನೂ ಒಳಗೊಂಡು ಜಗತ್ತಿನಾದ್ಯಂತ ಕೆಲ ಕೊರೊನಾ ದೃಢೀಕೃತ ಮಕ್ಕಳಲ್ಲಿ ಗುರುತಿಸಲಾಗಿದೆ. ಹಾಗೆಯೇ ಈ ಕಾಯಿಲೆಯ ಲಕ್ಷಣಗಳನ್ನು ಮೊಟ್ಟಮೊದಲ ಬಾರಿಗೆ ಮಕ್ಕಳಲ್ಲಿ ಗುರುತಿಸಿದ 'ಟೋಮಿಸಾಕೊ ಕವಾಸಾಕಿ' ಎಂಬ ಹೆಸರಿನ ತೊಂಬತ್ತೈದು ವರ್ಷ ವಯಸ್ಸಿನ ವೈದ್ಯ, ಇದೇ ವರ್ಷದ ಜೂನ್ ಐದರಂದು ಕಾಲವಶರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಕವಾಸಾಕಿ ಕಾಯಿಲೆಯ ಕುರಿತು ಜನಸಾಮಾನ್ಯರಲ್ಲಿ ಕೊಂಚಮಟ್ಟಿಗೆ ಅರಿವು ಮೂಡಿಸಬೇಕಾಗಿದೆ.

## ಏನಿದು ಕವಾಸಾಕಿ ಕಾಯಿಲೆ?

ಈ ಹೆಸರು ಕೇಳಿದೊಡನೆ ಒಂದೆರಡು ದಶಕಗಳ ಹಿಂದೆ ಜನಪ್ರಿಯವಾಗಿದ್ದ ಕವಾಸಾಕಿ ಬಜಾಜ್ ಬೈಕ್‌ನ ನೆನಪು ಜನಸಾಮಾನ್ಯರ ಮನದಲ್ಲಿ ಒಮ್ಮೆ ಸುಳಿದು ಹೋದರೆ ಅಚ್ಚರಿಯೇನಿಲ್ಲ. ನಿಜ. ಆ ಬೈಕ್ ನಂತೆಯೇ ಈ ಕಾಯಿಲೆಯ ಮೂಲವೂ ಸಹ ಜಪಾನ್ ದೇಶವೇ ಆಗಿದೆ. ಹಾಗೆ ನೋಡಿದರೆ ಇದೇನೂ ಇತ್ತೀಚಿನ ಕಾಯಿಲೆಯೇನಲ್ಲ. ಅರ್ಧ ಶತಮಾನಕ್ಕೂ ಹೆಚ್ಚಿನ ಇತಿಹಾಸವಿದೆ. 1967ರಲ್ಲಿ ಮೊಟ್ಟಮೊದಲ ಬಾರಿಗೆ ಜಪಾನಿನ ಸುಮಾರು ಐವತ್ತರಷ್ಟು ಮಕ್ಕಳಲ್ಲಿ ಟೋಮಿಸಾಕೊ ಕವಾಸಾಕಿಯವರಿಂದ ಗುರುತಿಸಲ್ಪಟ್ಟ ಈ ಕಾಯಿಲೆ, ಇತ್ತೀಚಿನ ದಿನಗಳಲ್ಲಿ ನಮ್ಮ ದೇಶದ ಮಕ್ಕಳಲ್ಲಿಯೂ ಸಹ ತುಸು ಹೆಚ್ಚೇ ಎನಿಸುವಷ್ಟು ಪ್ರಮಾಣದಲ್ಲಿ ಕಾಣಿಸಿಕೊಳ್ಳತೊಡಗಿದೆ. ವಾತಾವರಣದಲ್ಲಿರುವ ಮೂಲ ಕೊರೊನಾ ವೈರಾಣುವನ್ನೂ ಒಳಗೊಂಡು ಹಲವಾರು ಸೂಕ್ಷ್ಮಾಣುಗಳ ಸೋಂಕಿನಿಂದ ಉಂಟಾಗುವ ಶರೀರದ ರಕ್ಷಣಾ ವ್ಯವಸ್ಥೆಯಲ್ಲಿನ ವ್ಯತ್ಯಯವೇ ಈ ಕಾಯಿಲೆಗೆ ಕಾರಣ ಎಂದು ತಿಳಿದುಬಂದಿದೆ.

## ರೋಗ ಲಕ್ಷಣಗಳೇನು?

ಐದು ವರ್ಷದೊಳಗಿನ ಯಾವುದೇ ಮಗುವಿನಲ್ಲಿ ಕನಿಷ್ಠ ಐದು ದಿನಗಳವರೆಗೆ ನಿರಂತರವಾಗಿ ಜ್ವರ ಬರುತ್ತಿದ್ದು, ಕೆಳಕಂಡ ನಾಲ್ಕಕ್ಕಿಂತ ಹೆಚ್ಚು ರೋಗಲಕ್ಷಣಗಳು ಕಾಣಿಸಿಕೊಂಡರೆ ಅದು ಕವಾಸಾಕಿ ಕಾಯಿಲೆಯಿರಬಹುದು.

- ಕೀವು, ಗೀಜಿನ ಸ್ರವಿಕೆಯಿಲ್ಲದೆ ಕೆಂಪು ವರ್ಣಕ್ಕೆ ತಿರುಗಿದ ಎರಡೂ ಬದಿಯ ಕಣ್ಣಿನ ಹೊರಪೊರೆಗಳು (ಕಂಜಕ್ಟೈವಾ).
- ಕೆಂಪು ಕೆಂಪಾಗಿ ಕಾಣುವ ನಾಲಿಗೆ. ಇದು ಸ್ಟ್ರಾಬೆರಿ ಹಣ್ಣನ್ನು ಹೋಲುವುದರಿಂದ 'ಸ್ಟ್ರಾಬೆರಿ ನಾಲಿಗೆ' ಎಂತಲೇ ಕರೆಯಲಾಗುತ್ತದೆ.



- ಕೆಂಡದಂತೆ ಕೆಂಪಾಗಿರುವ ಬಾಯಿ ಮತ್ತು ಗಂಟಲು.
- ಕೆಂಪಾಗಿ ಬಿರುಕುಬಿಟ್ಟ ಒಣಗಿದ ತುಟಿಗಳು.
- ಚರ್ಮದ ಮೇಲೆ ದಡಾರವನ್ನು ಹೋಲುವಂಥ ಕೆಂಪನೆಯ ದದ್ದುಗಳು.
- ಅಂಗೈ ಮತ್ತು ಅಂಗಾಲುಗಳು ಕೆಂಪಾಗಿರುವುದು
- ಕುತ್ತಿಗೆಯ ಒಂದೇ ಪಾರ್ಶ್ವದಲ್ಲಿ ಊದಿಕೊಂಡ ಹಾಲ್ರಸ ಗ್ರಂಥಿಗಳು.

ಇವುಗಳಷ್ಟೇ ಅಲ್ಲದೆ ಕವಾಸಾಕಿ ಕಾಯಿಲೆಯಲ್ಲಿ ಕಾಣಿಸಿಕೊಳ್ಳಬಹುದಾದ ಇನ್ನಿತರೆ ರೋಗಲಕ್ಷಣಗಳೆಂದರೆ

- ಕೀಲುಗಳಲ್ಲಿ ನೋವು ಮತ್ತು ಉರಿಯೂತ.
- ಪಿತ್ತಕೋಶದಲ್ಲಿ ನೀರು ತುಂಬಿಕೊಳ್ಳುವುದು.
- ಸೋಂಕಿಲ್ಲದ ಮೆದುಳುಪೊರೆಯ ಉರಿಯೂತ
- ಹೃದಯದ ಹೊರಪೊರೆಯಲ್ಲಿ ನೀರು ತುಂಬಿಕೊಳ್ಳುವುದು.
- ಹೃದಯದ ಕಿರೀಟ ಧಮನಿಗಳಲ್ಲಿ ರಕ್ತ ಹೆಪ್ಪುಗಟ್ಟುವುದು.
- ಕಿರೀಟ ಧಮನಿಗಳು ಹಿಗ್ಗುವುದು (coronary aneurysm) ಮತ್ತು ದೀರ್ಘಾವಧಿಯಲ್ಲಿ ಅವುಗಳ ಆಂತರಿಕ ವ್ಯಾಸ ಕಿರಿದಾಗುವುದು.
- ಹೃದಯದ ಕವಾಟಗಳು ಹಾನಿಗೊಳಗಾಗುವುದು ಇತ್ಯಾದಿ.

ಈ ರೀತಿಯಾಗಿ ಶರೀರದ ಹಲವಾರು ಅಂಗಗಳು ಒಟ್ಟೊಟ್ಟಿಗೇ ಉರಿಯೂತಕ್ಕೊಳಗಾಗುವುದರಿಂದ ಕವಾಸಾಕಿ ಕಾಯಿಲೆಯನ್ನು 'ಬಹು ಅಂಗಗಳ ಉರಿಯೂತದ ಸಿಂಡ್ರೋಮ್' ಎಂತಲೂ ಕರೆಯಲಾಗುತ್ತದೆ.

ಸಾಮಾನ್ಯವಾಗಿ ಯಾವುದೇ ಸಮಸ್ಯೆಯಿಲ್ಲದೆ ಆರರಿಂದ ಎಂಟು ವಾರಗಳಲ್ಲಿ ಮಕ್ಕಳು ಈ ಕಾಯಿಲೆಯಿಂದ ಗುಣಮುಖರಾಗುವರಾದರೂ ಕೆಲವೊಮ್ಮೆ ಇದು ಮಾರಣಾಂತಿಕವಾಗಿಯೂ ಪರಿಣಮಿಸಬಲ್ಲದು. ಇದಕ್ಕೆ ಪ್ರಮುಖ ಕಾರಣಗಳೆಂದರೆ ಹಿಗ್ಗಿದ ಕಿರೀಟ ಧಮನಿ ಒಡೆದುಹೋಗುವುದು ಮತ್ತು ಹೃದಯಾಘಾತ. ಹಾಗಾಗಿ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಆರ್ಜಿತ ಹೃದ್ರೋಗಗಳಲ್ಲಿ ಕವಾಸಾಕಿ ಕಾಯಿಲೆಗೆ ಪ್ರಮುಖ ಸ್ಥಾನವನ್ನು ಕಲ್ಪಿಸಲಾಗಿದೆ ಮತ್ತು ಅಪರೂಪಕ್ಕೆ ಮಕ್ಕಳಲ್ಲಿಯೂ ಸಂಭವಿಸಬಹುದಾದ ಹೃದಯಾಘಾತದ ಪ್ರಮುಖ ಕಾರಣವೆಂದು ಪರಿಗಣಿಸಲಾಗಿದೆ.

## ಚಿಕಿತ್ಸಾ ಕ್ರಮಗಳು

ರೋಗಲಕ್ಷಣಗಳ ಆಧಾರದ ಮೇಲೆ ಕವಾಸಾಕಿ ಕಾಯಿಲೆಯನ್ನು ಶಂಕಿಸಲಾದ ಮಕ್ಕಳಲ್ಲಿ ಇಎಸ್‌ಆರ್, ಬಿಳಿ ರಕ್ತಕಣಗಳ ಮಾಪನ ಮುಂತಾದ ಕೆಲವು ಪರೀಕ್ಷೆಗಳು ರೋಗಪತ್ತೆಗೆ ಸಹಕಾರಿಯಾಗಬಲ್ಲವು. ಇ ಸಿ ಜಿ, ಇಕೊ ಪರೀಕ್ಷೆಗಳು ಗಂಭೀರ ಸ್ವರೂಪದ ಹೃದ್ರೋಗ ಸಮಸ್ಯೆಗಳನ್ನು ಪತ್ತೆಹಚ್ಚಬಲ್ಲವು. ಅಂಥ ಮಕ್ಕಳಿಗೆ ಆಸ್ಪಿರಿನ್, ಇಮ್ಯುನೊಗ್ಲಾಬ್ಯುಲಿನ್ ಮುಂತಾದ ಔಷಧಗಳನ್ನು ಬಳಸಿ ಚಿಕಿತ್ಸೆ ನೀಡಲಾಗುತ್ತದೆ. ಆಸ್ಪಿರಿನ್ ರಕ್ತದ ಹೆಪ್ಪುಗಟ್ಟುವಿಕೆಯನ್ನು ತಡೆಗಟ್ಟಿ, ಹೃದಯದ ಧಮನಿಗಳಲ್ಲಿ ರಕ್ತದ ಪರಿಚಲನೆ ಸರಾಗವಾಗುವಂತೆ ಮಾಡಬಲ್ಲದು. ಆದುದರಿಂದ ಮಗು ಕಾಯಿಲೆಯಿಂದ ಗುಣಮುಖವಾದ ನಂತರವೂ ಬಹಳ ದಿನಗಳವರೆಗೆ ಸಣ್ಣ ಪ್ರಮಾಣದ ಆಸ್ಪಿರಿನ್ ಔಷಧವನ್ನು ನೀಡಬೇಕಾಗುತ್ತದೆ.

ಆರಂಭದಲ್ಲಿಯೇ ಗುರುತಿಸಿ, ಸಮರ್ಪಕ ಚಿಕಿತ್ಸೆ ನೀಡುವುದರ ಮೂಲಕ ಕವಾಸಾಕಿ ಕಾಯಿಲೆಯಿಂದ ಉಂಟಾಗುವ ಸಾವುನೋವುಗಳಿಂದ ಮಕ್ಕಳನ್ನು ರಕ್ಷಿಸಬಹುದು. ಹಾಗಾಗಿ ಮೇಲೆ ತಿಳಿಸಿದ ಯಾವುದೇ ರೋಗಲಕ್ಷಣಗಳು ಮಗುವಿನಲ್ಲಿ ಕಾಣಿಸಿಕೊಂಡರೆ ಪೋಷಕರು ಉದಾಸೀನ ತೋರದೆ ತಕ್ಷಣವೇ ವೈದ್ಯರನ್ನು ಸಂಪರ್ಕಿಸುವುದು ಒಳಿತು.

(ಲೇಖಕರು ತುಮಕೂರಿನಲ್ಲಿ ಮಕ್ಕಳ ತಜ್ಞರು.
ಸಂಪರ್ಕ: 8892561855)